## ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀಮತಿ ದಿವ್ಯ ಜ್ಯೋತಿ ಬಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಾಮನದುರ್ಗ ಗ್ರಾಮ ಪಂಚಾಯತಿ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14ಎ ಅಡಿಯಲ್ಲಿ ಮಾನ್ಯ ಉಪಲೋಕಯುಕ್ತರಿಗೆ ವಹಿಸುವ ಬಗ್ಗೆ - ಆದೇಶ.

ಓದಲಾಗಿದೆ: 1. ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ:**Compt/Uplok/MYS-820/2014/DRE-1, ದಿ:07-01-2019.**

2. ಮಾನ್ಯ ಉಪಲೋಕಾಯಕ್ತರವರ ವರದಿ ಸಂಖ್ಯೆ:**Compt/Uplok/MYS-820/2014/DRE-1, ದಿ:02-01-2019.**

ಪ್ರಸ್ತಾವನೆ:

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ದಿನಾಂಕ:07-01-2019 ರವರ ಪತ್ರದೊಂದಿಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 12(3) ರನ್ವಯ ಮಾನ್ಯ ಉಪಲೋಕಾಯಕ್ತರವರ ಸಲ್ಲಿಸಿರುವ ವರದಿಯಲ್ಲಿ ಶ್ರೀ ರಾಜು ಹೆಚ್ ಬಿನ್ ಹನುಮನಾಯ್ಕ, ಸಾಂತವೇರಿ ಅಂಚೆ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಶ್ರೀ ದೇವರಾಜು, ಅಧ್ಯಕ್ಷರು, ಕಾಮನದುರ್ಗ ಗ್ರಾಮ ಪಂಚಾಯತಿ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಮತ್ತು ಶ್ರೀಮತಿ ದಿವ್ಯಜ್ಯೋತಿ ಬಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಾಮನದುರ್ಗ ಗ್ರಾಮ ಪಂಚಾಯತಿ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

ದೂರಿನ ಸಂಕ್ಷಿಪ್ತ ವಿವರಣೆ:

ದೂರುದಾರರು ತಮ್ಮ ದೂರಿನಲ್ಲಿ ತರೀಕೆರೆ ತಾಲ್ಲೂಕಿನ ಸಾಂತವೇರಿ ಗ್ರಾಮದಲ್ಲಿ 2012-13ನೇ ಸಾಲಿನಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳು ನಡೆದಿದ್ದು, ಕಾಮಗಾರಿಗಳು ಕಳಪೆಯಾಗಿರುತ್ತವೆ. ಗ್ರಾಮ ಪಂಚಾಯಿತಿ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಗ್ರಾಮದ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡದೆ, ಸಾರ್ವಜನಿಕರ ಹಿತಾಸಕ್ತಿ ಕಾಪಾಡದೆ, ಕಳಪೆ ಕಾಮಗಾರಿಯನ್ನು ನಡೆಸಿ ಗ್ರಾಮದ ಅವ್ಯವಸ್ಥೆಗೆ ಕಾರಣರಾಗಿರುತ್ತಾರೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

ದೂರುದಾರರು ತಮ್ಮ ದೂರಿನ ಜೊತೆ ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ಓಂಬಡ್ಸ್‌ಮನ್ ನ್ಯಾಯಾಲಯದಲ್ಲಿ ವಿಚಾರಣೆ ನಡೆದು ಪಂಚಾಯತ್ ಅಭಿವೃದ್ಧಿ ಅಧಿಕಾರಿ ದಿವ್ಯಜ್ಯೋತಿ ಮತ್ತು ಪಂಚಾಯಿತಿ ಅಧ್ಯಕ್ಷರಾದ ಶ್ರೀ ದೇವರಾಜು ರವರು ಸಮವಾಗಿ ದುರುಪಯೋಗವಾಗಿರುವ ಸರ್ಕಾರದ ಹಣ ರೂ.20,200/-ಗಳನ್ನು ಪಂಚಾಯತ್ ರಾಜ್ ಇಲಾಖೆಗೆ ಕಳುಹಿಸಿಕೊಡತಕ್ಕದ್ದು ಎಂದು ಆದೇಶಿಸಿದ್ದು ಮತ್ತು ಅದೇ ರೀತಿ ಯೋಜನೆಯ ಅನುಷ್ಠಾನ ಮತ್ತು ಹಣ ಬಳಕೆಯ ಬಗ್ಗೆ ಉತ್ತರದಾಯಿತ್ವ ಮತ್ತು ಪಾರದರ್ಶಕತೆಯನ್ನು ಎತ್ತಿ ಹಿಡಿಯದೆ ಇರುವ ಪಂಚಾಯತ್ ಅಭಿವೃದ್ಧಿ ಅಧಿಕಾರಿ ದಿವ್ಯಜ್ಯೋತಿ, ಕಿರಿಯ ಇಂಜಿನಿಯರ್ ಹರೀಶ್ ಮತ್ತು ಪಂಚಾಯಿತಿ ಅಧ್ಯಕ್ಷರಾದ ಶ್ರೀ ದೇವರಾಜು ಇವರಿಗೆ ದಂಡ ವಿಧಿಸಿರುವುದು ಕಂಡುಬರುತ್ತದೆ. ಸದರಿ ಅಂಶವನ್ನು ಗಮನಿಸಿದಾಗ ಎದುರುದಾರರು ಹಣದುರುಪಯೋಗ ಮಾಡಿರುವುದು ಮತ್ತು ಕೆಲವು ಅವ್ಯವಹಾರಗಳಲ್ಲಿ ಭಾಗಿಯಾಗಿರುವುದು ಮೇಲ್ನೋಟಕ್ಕೆ ಕಂಡುಬಂದ ಕಾರಣ ದೂರಿನ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿಕ್ಕಮಗಳೂರು ಇವರಿಗೆ ಆದೇಶಿಸಲಾಗಿತ್ತು.

ಪೊಲೀಸ್ ಉಪಾಧೀಕ್ಷಕರು (ಪ್ರಭಾರ), ಕರ್ನಾಟಕ ಲೋಕಾಯುಕ್ತ, ಚಿಕ್ಕಮಗಳೂರು ವಿಭಾಗ ಇವರು ವರದಿಯನ್ನು ಸಲ್ಲಿಸಿದ್ದು ಈ ಕೆಳಗಿನಂತೆ ಅಭಿಪ್ರಾಯವನ್ನು ನೀಡಿರುತ್ತಾರೆ.

"ಸದರಿ ಅರ್ಜಿಯನ್ನು ವಿಚಾರಣೆ ಮಾಡಲಾಗಿದ್ದು, ತಿಳಿದುಬಂದ ಅಂಶವೇನೆಂದರೇ 1) ತರೀಕೆರೆ ತಾಲ್ಲೂಕಿನ ಸಾಂತವೇರಿ ಗ್ರಾಮದಲ್ಲಿ 2012-2013ನೇ ಸಾಲಿನಲ್ಲಿ ಸಂತೇಕಟ್ಟೆ ನಿರ್ಮಾಣ ಕಾಮಗಾರಿಗೆ ಕಂಟ್ರಾಕ್ಟರ್‌ರವರು ರೂ.32,342/-ಗಳ ಎಸ್ಟಿಮೇಟ್ ನೀಡಿದ್ದು, ಗ್ರಾಮ ಪಂಚಾಯಿತಿ ಅಧಿಕಾರಿಗಳು ರೂ.34,991/-ಗಳನ್ನು ಖರ್ಚು ಮಾಡಿರುವುದು ಕಂಡುಬಂದಿರುತ್ತದೆ. ಗ್ರಾಮ ಪಂಚಾಯಿತಿ ಅಧಿಕಾರಿಗಳು ಎಸ್ಟೀಮೇಟ್‌ಗಿಂತ ಹೆಚ್ಚಿನ ಹಣ ಉಪಯೋಗಿಸಿ ಕಾಮಗಾರಿ ನಡೆಸಿದ್ದು, ಕಾಮಗಾರಿಯಲ್ಲಿ ಕಳಪೆ ಕಾಮಗಾರಿಯಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. 2) ಸಾಂತವೇರಿ ಗ್ರಾಮದ ದೊಬಿಹಳ್ಳದ ಕೆರೆಯ ರೀವಿಟ್‌ಮೆಂಟ್ ಹಾಗೂ ಅಭಿವೃದ್ಧಿ ಕಾಮಗಾರಿಯ ರೀವಿಟ್‌ಮೆಂಟ್ 2.5 ಮೀಟರ್ ಎತ್ತರವಿದ್ದು, ಈ ಕಾಮಗಾರಿಗೆ ರೂ.1,27,875/-ಗಳ ಹಣ ಉಪಯೋಗಿಸಿದ್ದು, ಎನ್.ಎಂ.ಆರ್ ಪರಿಶೀಲಿಸಲಾಗಿ, ರೂ.35,191/-ಗಳ ಹಣ ವ್ಯತ್ಯಾಸ ಕಂಡುಬಂದಿರುತ್ತದೆ. 3) ಸಾಂತವೇರಿ ಬೈಪಾಸ್ ರಸ್ತೆಯ ಪಕ್ಕದಲ್ಲಿರುವ ಉದ್ಯಾನವನದಲ್ಲಿ ನೀರು ಕಾಲುವೆ ನಿರ್ಮಾಣ ಕಾಮಾಗಾರಿಗೆ ರೂ.1,44,983/-ಗಳು ಖರ್ಚಾಗಿದ್ದು, ರೂ.10,602/- ಗಳು ವ್ಯತ್ಯಾಸ ಕಂಡುಬಂದಿರುತ್ತದೆ. 4) ಸಾಂತವೇರಿ ಗ್ರಾಮದಲ್ಲಿ ಮಳೆಗಾಲದಲ್ಲಿ ಕೃಷಿ ಅರಣ್ಯ ವಿಸ್ತರಣೆ ಸಸಿ ಬೆಳೆಸುವ ಕಾಮಗಾರಿಗೆ ರೂ.26,875/-ಗಳು ಖರ್ಚಾಗಿದ್ದು, ಎಂ.ಬಿ ಪುಸಕ್ತದಲ್ಲಿ ರೂ.41,148/-ಗಳು ಖರ್ಚಾಗಿರುವುದು ಕಂಡುಬಂದಿರುತ್ತದೆ. ರೂ.5,727/-ಗಳನ್ನು ಹೆಚ್ಚಿಗೆ ಪಾವತಿಸಿರುವುದು ದಾಖಲೆಗಳಿಂದ ಕಂಡುಬಂದಿರುತ್ತದೆ. 5) ಸಾಂತವೇರಿ ಗ್ರಾಮದ ಆರೋಗ್ಯ ಕೇಂದ್ರ ಮತ್ತು ಅಂಗನವಾಡಿ ಕೇಂದ್ರದ ಹತ್ತಿರ ಸಮುದಾಯ ಅರಣ್ಯೀಕರಣ ಕಾಮಗಾರಿಗೆ ರೂ.55,000/-ಗಳ ಎಸ್ಟೀಮೇಟ್ ನೀಡಿದ್ದು, ಎನ್.ಎಂ.ಆರ್ ಪುಸ್ತಕದಲ್ಲಿ ರೂ.52,700/-ಗಳು ಖರ್ಚಾಗಿದೆ ಎಂದು ನಮೂದಿಸಿದ್ದು, ಎಂ.ಬಿ ಪುಸ್ತಕದಲ್ಲಿ ರೂ.45,750/-ಗಳು ಎಂದು ನಮೂದಾಗಿದ್ದು, ಅರಣ್ಯೀಕರಣ ಕಾಮಗಾರಿಯು ಕಳಪೆ ಕಾಮಗಾರಿಯಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. 6) ಸಾಂತವೇರಿ ಚಿಕ್ಕಮಗಳೂರು ರಸ್ತೆಯ ಚೌಕದಲ್ಲಿರುವ ಉದ್ಯಾನವನ ಹಿಂದೂ ಸ್ಮಶಾನದಲ್ಲಿ ಸಮುದಾಯ ಅರಣ್ಯೀಕರಣ ಕಾಮಗಾರಿಯಲ್ಲಿ ರೂ.21,885/-ಗಳು ಖರ್ಚಾಗಿದ್ದು, ಓಚರ್‌ನಲ್ಲಿ ರೂ.26,920/-ಗಳನ್ನು ಖರ್ಚು ಮಾಡಿರುವುದು ನಮೂದಾಗಿರುತ್ತದೆ ಹಾಗೂ ಸದರಿ ಕಾಮಗಾರಿಯು ಕಳಪೆ ಕಾಮಗಾರಿಯಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಸದರಿ ಕಾಮಗಾರಿಗೆ ರೂ.5,035/-ಗಳನ್ನು ಹೆಚ್ಚಿಗೆ ಬಳಸಿರುವುದು ಕಂಡುಬಂದಿರುತ್ತದೆ. 7) ಪಾರ್ವತಮ್ಮನ ಮನೆಯಿಂದ ಎಸ್ಟೇಟ್ ಬೇಲಿಯವರೆಗೆ ಪೈಪ್‌ಲೈನ್ ಅಳವಡಿಸುವ ಕಾಮಾಗಾರಿಯು 98 ಮೀಟರ್ ಉದ್ದವಿದ್ದು, ಸದರಿ ಕಾಮಗಾರಿಗೆ ಇಂಜಿನಿಯರ್‌ರವರು ರೂ.15,000/-ಗಳ ಎಸ್ಟೀಮೇಟ್ ನೀಡಿದ್ದು, ರೂ.14,850/-ಗಳು ಖರ್ಚಾಗಿರುವುದು ದಾಖಲಾತಿಗಳಿಂದ ಕಂಡುಬಂದಿರುತ್ತದೆ. 8) ವರ್ಕ್‌ಶಾಪ್‌ನಿಂದ ಮಂಜು ಮನೆವರೆಗೆ ಪೈಪ್‌ಲೈನ್ ನಿರ್ಮಾಣ ಕಾಮಗಾರಿಗೆ ಇಂಜಿನಿಯರ್‌ರವರು ರೂ.60,000/-ಗಳ ಎಸ್ಟೀಮೇಟ್ ನೀಡಿದ್ದು, ರೂ.59,942/-ಗಳು ಕಾಮಗಾರಿಗೆ ಖರ್ಚಾಗಿರುವುದು ದಾಖಲಾತಿಗಳಿಂದ ಕಂಡುಬಂದಿರುತ್ತದೆ. 9) 2010ನೇ ಮಳೆಗಾಲದಲ್ಲಿ ಕೃಷಿ ಅರಣ್ಯ ವಿಸ್ತರಣೆ ಸಸಿ ಬೆಳೆಸುವ ಕಾಮಗಾರಿಗೆ ತರೀಕೆರೆ ಎಸ್.ಎಫ್ ರವರು ರೂ.1,87,246/-ಗಳ ಎಸ್ಟೀಮೇಟ್ ನೀಡಿದ್ದು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ರೂ.2,98,500/-ಗಳು ಖರ್ಚು ಮಾಡಿರುವುದು ದಾಖಲಾತಿಗಳಿಂದ ಕಂಡುಬಂದಿರುತ್ತದೆ. 10) ವರ್ಕ್‌ಶಾಪ್‌ನಿಂದ ಮಂಜು ಮನೆವರೆಗೆ ಪೈಪ್‌ಲೈನ್ ಹಾಗೂ ಸಿಸ್ಟನ್ ಅಳವಡಿಸುವ ಕಾಮಗಾರಿಗೆ ಕಾಮನದುರ್ಗ ಗ್ರಾಮ ಪಂಚಾಯತಿಯ 2011-12ನೇ ಸಾಲಿನ ಪಿ.ಆರ್.ಇ ಗ್ರಾಮೀಣ ನೀರು ಸರಬರಾಜು ಇಲಾಖಾ ದರಪಟ್ಟಿಯಂತೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಇಂಜಿನಿಯರ್ ರವರು ಅಂದಾಜು ಮೊತ್ತ ರೂ.65,000/-ಗಳೆಂದು ಎಸ್ಟೀಮೇಟ್ ನೀಡಿದ್ದು, ಸದರಿ ಕಾಮಗಾರಿಗೆ ರೂ. 65,000/-ಗಳು ಖರ್ಚಾಗಿರುವುದು ದಾಖಲಾತಿಗಳಿಂದ ಕಂಡುಬಂದಿರುತ್ತದೆ. 11) ಅಂಬೇಡ್ಕರ್ ನಗರಕ್ಕೆ ವಿದ್ಯುತ್ ಸಂಪರ್ಕ ಕಾಮಗಾರಿಗೆ ರೂ.41,913/-ಗಳು ಖರ್ಚಾಗಿದ್ದು, ವಿದ್ಯುತ್ ಸಂಪರ್ಕ ಕಲ್ಪಿಸಿರುವುದು ಕಂಡುಬಂದಿರುತ್ತದೆ.

ಸಾಂತೇವೇರಿ ಗ್ರಾಮದ ಪಂಚಾಯತ್ ಅಭಿವೃದ್ಧಿ ಅಧಿಕಾರಿ ದಿವ್ಯಜ್ಯೋತಿ ಮತ್ತು ಪಂಚಾಯಿತಿ ಅಧ್ಯಕ್ಷರಾದ ಶ್ರೀ ದೇವರಾಜುರವರು ಸೇರಿಕೊಂಡು ಮೇಲ್ಕಂಡ ಕೆಲವೊಂದು ಕಳಪೆ ಕಾಮಗಾರಿಗಳನ್ನು

ಮಾಡಿದ್ದು, ಕೆಲವೊಂದು ಕಾಮಗಾರಿಗಳಿಗೆ ಎಸ್ಟಿಮೇಟ್‌ಗಿಂತ ಹೆಚ್ಚು ಖರ್ಚು ಮಾಡಿರುವುದು ಸ್ಥಳ ಮತ್ತು ದಾಖಲಾತಿಗಳ ಪರಿಶೀಲನೆಯಿಂದ ಕಂಡುಬಂದಿರುತ್ತದೆ" ಎಂದು ಅಭಿಪ್ರಾಯ ನೀಡಿರುತ್ತಾರೆ.

ತನಿಖಾಧಿಕಾರಿಯ ವರದಿಯ ಮೇಲೆ ಆಕ್ಷೇಪಣೆ ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು. 1 ಮತ್ತು 2ನೇ ಎದುರುದಾರರು ಆಕ್ಷೇಪಣೆಯಲ್ಲಿ ಎಸ್ಟಿಮೇಟ್ ಮೊತ್ತಕ್ಕಿಂತ ಹೆಚ್ಚಿಗೆ ಹಣ ಖರ್ಚು ಮಾಡಿರುವುದಿಲ್ಲ. ತಾಂತ್ರಿಕವಾಗಿ ಕಾಮಗಾರಿಯ ಗುಣಮಟ್ಟವನ್ನು ಪರೀಕ್ಷಿಸಿ ಕಿರಿಯ ಅಭಿಯಂತರರು ಬಿಲ್ ದಾಖಲಿಸಿದ್ದು, ಅದರಂತೆ ಕಾಮಗಾರಿಗಳಿಗೆ ಹಣ ಪಾವತಿ ಮಾಡಲಾಗಿದೆ ಮತ್ತು ಕಾಮಗಾರಿಯು ಕಳಪೆಯಾಗಿರುವುದಿಲ್ಲವೆಂದು ಹೇಳಿರುತ್ತಾರೆ. ಮುಂದುವರೆದು, ತಮ್ಮ ಆಕ್ಷೇಪಣೆಯಲ್ಲಿ 1) ಸಾಂತವೇರಿ ಗ್ರಾಮದಲ್ಲಿ ಸಂತೇಕಟ್ಟೆ ನಿರ್ಮಾಣಕ್ಕೆ ರೂ.35,000/-ಗಳ ಅಂದಾಜು ಪಟ್ಟಿಯಿದ್ದು, ಬಿಲ್ ಮೊತ್ತ ರೂ.34,991/-ಗಳು, ರೂ.2,649/-ಗಳ ಮೊತ್ತದ ಉಪಕರಗಳನ್ನು ಕಟ್ಟಾಯಿಸಿ ರೂ.32,342/-ಗಳನ್ನು ಪಾವತಿಸಲಾಗಿದೆ. ಇದು ಕಳಪೆ ಕಾಮಗಾರಿಯಾಗಿರುವುದಿಲ್ಲ. 2) ದೋಬಿಹಳ್ಳದ ಕೆರೆಯ ರೀವಿಟ್‌ಮೆಂಟ್ ಕಾಮಗಾರಿಯು ರೂ.2.00 ಲಕ್ಷಗಳಿಗೆ ಅಂದಾಜು ಪಟ್ಟಿಯಾಗಿದ್ದು, ಕೂಲಿ ಮೊತ್ತ ರೂ.1,41,195/-ಗಳು, ಸಾಮಾಗ್ರಿ ಮೊತ್ತ ರೂ.24,037/-ಗಳು, ಒಟ್ಟು ಮೊತ್ತ ರೂ.1,65,232/-ಗಳು ಪಾವತಿಸಿದ್ದು, ಹೆಚ್ಚಿಗೆ ಪಾವತಿಸಿರುವುದಿಲ್ಲ. 3)ಸಾಂತವೇರಿ ಬೈಪಾಸ್ ರಸ್ತೆಯ ಪಕ್ಕದಲ್ಲಿರುವ ಉದ್ಯಾನವನದಲ್ಲಿ ನೀರು ಕಾಲುವೆ ನಿರ್ಮಾಣ ಕಾಮಾಗಾರಿಗೆ ರೂ.1,50,000/-ಗಳಿಗೆ ಅಂದಾಜು ಪಟ್ಟಿಯಾಗಿದ್ದು, ಕೂಲಿ ಮೊತ್ತ ರೂ.86,335/-ಗಳು, ಸಾಮಾಗ್ರಿ ಮೊತ್ತ ರೂ.51,400/-ಗಳು ಖರ್ಚಾಗಿದ್ದು, ಹೆಚ್ಚಿಗೆ ಪಾವತಿಸಿರುವುದಿಲ್ಲ. 4) ಸಾಂತವೇರಿ ಗ್ರಾಮದಲ್ಲಿ ಮಳೆಗಾಲದಲ್ಲಿ ಕೃಷಿ ಅರಣ್ಯ ವಿಸ್ತರಣೆ ಸಸಿ ಬೆಳೆಸುವ ಕಾಮಗಾರಿಗೆ ರೂ.46,875/-ಗಳು ಖರ್ಚಾಗಿದ್ದು, ಎಂ.ಬಿ ಪುಸ್ತಕದಲ್ಲಿ ರೂ.41,148/-ಗಳು ನಮೂದಾಗಿದ್ದು, ರೂ.5,027/-ಗಳನ್ನು ಗೀಡಗಳಿಗೆ ಕೋಲು ಮತ್ತು ದಾರಕ್ಕೆ ವೆಚ್ಚವಾಗಿರುತ್ತದೆ. 5) ಸಾಂತವೇರಿ ಗ್ರಾಮದ ಆರೋಗ್ಯ ಕೇಂದ್ರ ಮತ್ತು ಅಂಗನವಾಡಿ ಕೇಂದ್ರದ ಹತ್ತಿರ ಸಮುದಾಯ ಅರಣ್ಯೀಕರಣ ಕಾಮಗಾರಿಗೆ ರೂ.55,000/-ಗಳ ಅಂದಾಜು ಪಟ್ಟಿಯಾಗಿದ್ದು, ರೂ.52,700/-ಗಳು ಪಾವತಿಯಾಗಿರುತ್ತದೆ. ಕಾಮಗಾರಿ ಸ್ಥಳದಲ್ಲಿ ತಂತಿಬೇಲಿ ಇಲ್ಲದ ಕಾರಣ ಗೀಡಗಳನ್ನು ಜಾನುವಾರುಗಳು ಹಾಳು ಮಾಡಿರುತ್ತವೆ. ಈ ಕಾಮಗಾರಿಯು ಕಳಪೆ ಕಾಮಗಾರಿಯಾಗಿರುವುದಿಲ್ಲ. 6) ಸಾಂತವೇರಿ ಚಿಕ್ಕಮಗಳೂರು ರಸ್ತೆಯ ಚೌಕದಲ್ಲಿರುವ ಉದ್ಯಾನವನ ಹಿಂದೂ ಸ್ಮಶಾನದಲ್ಲಿ ಸಮುದಾಯ ಅರಣ್ಯೀಕರಣ ಕಾಮಗಾರಿಯ ಅಂದಾಜು ಮೊತ್ತ ರೂ.1,02,800/-ಗಳು ಇದ್ದು, ರೂ.42,500/- ವಾಚ್ ಚಾರ್ಜಸ್, ರೂ.26,920/- ವಾರ್ಡ್ ಚಾರ್ಜಸ್, ರೂ.11,986/- ಮೇಟ್ ಚಾರ್ಜಸ್ ಆಗಿದ್ದು, ಹೆಚ್ಚಿಗೆ ಪಾವತಿಸಿರುವುದಿಲ್ಲ. 7) ಪಾರ್ವತಮ್ಮನ ಮನೆಯಿಂದ ಎಸ್ಟೇಟ್ ಬೇಲಿಯವರೆಗೆ ಪೈಪ್‌ಲೈನ್ ನಿರ್ಮಾಣ ಕಾಮಗಾರಿಗೆ ರೂ.15,000/-ಗಳ ಅಂದಾಜು ಪಟ್ಟಿಯಾಗಿದ್ದು, ಬಿಲ್ ಮೊತ್ತ ರೂ.14,850/-ಗಳು ಆಗಿದ್ದು, ಉಪಕರ ರೂ.921/- ಆಗಿದ್ದು, ರೂ.14,650/-ಗಳನ್ನು ಪಾವತಿಸಲಾಗಿರುತ್ತದೆ. 8) ವರ್ಕ್‌ಶಾಪ್‌ನಿಂದ ಮಂಜು ಮನೆವರೆಗೆ ಪೈಪ್‌ಲೈನ್ ನಿರ್ಮಾಣ ಕಾಮಗಾರಿಗೆ ರೂ.60,000/-ಗಳ ಅಂದಾಜು ಪಟ್ಟಿಯಾಗಿದ್ದು, ರೂ.59,942/-ಗಳನ್ನು ಪಾವತಿಸಲಾಗಿರುತ್ತದೆ. ಕಾಮಗಾರಿ ಉತ್ತಮವಾಗಿರುತ್ತದೆ. 9) ಪುಟ್ಟರಾಜು ಮನೆ ಹತ್ತಿರ ಹಾಗೂ ಉದ್ಯಾನವನ ಪಕ್ಕದಲ್ಲಿ ಸಿಸ್ಟನ್ ಅಳವಡಿಸುವ ಕಾಮಗಾರಿಗೆ ರೂ. 65,000/-ಗಳ ಅಂದಾಜು ಪಟ್ಟಿಯಾಗಿದ್ದು, ಕಾಮಗಾರಿಗೆ ರೂ.65,535/- ಪಾವತಿಸಿದ್ದು ಹಾಗೂ ಉಪಕರ ರೂ.4142/-ಗಳು, ಒಟ್ಟು ರೂ.64,877/-ಗಳನ್ನು ಪಾವತಿಸಲಾಗಿರುತ್ತದೆ. 10) ಅಂಬೇಡ್ಕರ್ ನಗರಕ್ಕೆ ವಿದ್ಯುತ್ ಸಂಪರ್ಕ ಕಾಮಗಾರಿಗೆ ರೂ.41,913/-ಗಳ ಅಂದಾಜು ಪಟ್ಟಿಯಾಗಿದ್ದು, ಅದರಂತೆ ರೂ.41,913/-ಗಳು ಪಾವತಿಸಲಾಗಿರುತ್ತದೆ ಎಂದು ಹೇಳಿರುತ್ತಾರೆ.

ಸಾಂತವೇರಿ ಗ್ರಾಮದಲ್ಲಿ ಸಂತೇಕಟ್ಟೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಬಿಲ್ಲನ್ನು ಪರಿಶೀಲಿಸಿದಾಗ ಒಟ್ಟು ಬಿಲ್ ಮೊತ್ತ ರೂ.34,991/-ಗಳು ಆಗಿದ್ದು, ಆ ಪೈಕಿ ರೂ.2,649/-ಗಳ ತೆರಿಗೆಯನ್ನು ಕಟಾಯಿಸಿ, ರೂ.32,142/-ಗಳಿಗೆ ಚೆಕ್ ನೀಡಿರುವುದು ಕಂಡುಬರುತ್ತದೆ.

ಸಾಂತವೇರಿ ಗ್ರಾಮದ ದೋಬಿಹಳ್ಳದ ಕೆರೆಯ ರೀವಿಟ್‌ಮೆಂಟ್ ಹಾಗೂ ಅಭಿವೃದ್ಧಿ ಕಾಮಗಾರಿಯ ರೀವಿಟ್‌ಮೆಂಟ್ 2.5 ಮೀಟರ್ ಎತ್ತರವಿದ್ದು, ಈ ಕಾಮಗಾರಿಗೆ ರೂ.1,27,875/-ಗಳ ಹಣ ಉಪಯೋಗಿಸಿದ್ದು, ಎನ್.ಎಂ.ಆರ್ ಪರಿಶೀಲಿಸಲಾಗಿ ರೂ.35,191/-ಗಳ ಹಣ ವ್ಯತ್ಯಾಸ ಕಂಡುಬಂದಿರುತ್ತದೆ ಎಂದು ಹೇಳಿದ್ದು, ಸದರಿ ವ್ಯತ್ಯಾಸದ ಬಗ್ಗೆ ಎದುರುದಾರರು ತೃಪ್ತಿಕರವಾದ ವಿವರಣೆಯನ್ನು ನೀಡಿರುವುದಿಲ್ಲ ಮತ್ತು ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಸದರಿ ಕಾಮಗಾರಿಗೆ ಸಂಬಂಧಪಟ್ಟಂತೆ ತನಿಖಾಧಿಕಾರಿಗಳು ಹಾಜರುಪಡಿಸಿರುವ ಅಳತೆ ಪುಸ್ತಕದ ಪ್ರತಿಯನ್ನು ಪರಿಶೀಲಿಸಿದಾಗ, ಅಂದಾಜು ಪಟ್ಟಿಯ ಕಾಲಂ ನಂ.1ರ ಕಾಮಗಾರಿಯನ್ನು ಮಾಡಿರುವ ಬಗ್ಗೆ ಅಳತೆ ಪುಸ್ತಕದಲ್ಲಿ ನಮೂದಾಗಿರುವುದು ಕಂಡು ಬರುತ್ತಿಲ್ಲ. ಸದರಿ ಕಾಮಗಾರಿಗೆ ಸಂಬಂಧಪಟ್ಟಂತೆ ಎಷ್ಟು ಮೊತ್ತಕ್ಕೆ ಬಿಲ್ ತಯಾರಿಸಲಾಗಿದೆ ಎನ್ನುವ ಬಗ್ಗೆ ಎದುರುದಾರರು ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

ಸಾಂತವೇರಿ ಬೈಪಾಸ್ ರಸ್ತೆಯ ಪಕ್ಕದಲ್ಲಿರುವ ಉದ್ಯಾನವನದಲ್ಲಿ ನೀರು ಕಾಲುವೆ ನಿರ್ಮಾಣ ಕಾಮಗಾರಿಗೆ ತನಿಖಾಧಿಕಾರಿ ಹಾಜರುಪಡಿಸಿರುವ ಅಳತೆ ಪುಸ್ತಕದ ನಕಲನ್ನು ಪರಿಶೀಲಿಸಿದಾಗ, ಕಾಮಗಾರಿ ನಡೆದ ದಿನಾಂಕದಂದು ಅಳತೆ ಪುಸ್ತಕದಲ್ಲಿ ನಮೂದು ಮಾಡಿರುವುದು ಕಂಡುಬರುತ್ತಿಲ್ಲ. ಸದರಿ ಕಾಮಗಾರಿಗೆ ಸಂಬಂಧಪಟ್ಟಂತೆ ಆಗಿರುವ ಖರ್ಚಿನ ಬಗ್ಗೆ ದಾಖಲಾತಿ ಮತ್ತು ಅದು ಎಷ್ಟು ಮೊತ್ತಕ್ಕೆ ಬಿಲ್ ಮಾಡಲಾಗಿದೆ ಎನ್ನುವ ಬಗ್ಗೆ ಎದುರುದಾರರು ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

ಸಾಂತವೇರಿ ಗ್ರಾಮದಲ್ಲಿ ಮಳೆಗಾಲದಲ್ಲಿ ಕೃಷಿ ಅರಣ್ಯ ವಿಸ್ತರಣೆ ಸಸಿ ಬೆಳೆಸುವ ಕಾಮಗಾರಿ, ಆರೋಗ್ಯ ಕೇಂದ್ರ ಮತ್ತು ಅಂಗನವಾಡಿ ಕೇಂದ್ರದ ಹತ್ತಿರ ಸಮುದಾಯ ಅರಣ್ಯೀಕರಣ ಕಾಮಗಾರಿ, ಸ್ಮಶಾನದಲ್ಲಿ ಸಮುದಾಯ ಅರಣ್ಯೀಕರಣ ಕಾಮಗಾರಿ, ಪಾರ್ವತಮ್ಮನ ಮನೆಯಿಂದ ಎಸ್ಟೇಟ್ ಬೇಲಿಯವರೆಗೆ ಪೈಪ್‌ಲೈನ್ ಅಳವಡಿಸುವ ಕಾಮಾಗಾರಿ, ವರ್ಕ್‌ಶಾಪ್‌ನಿಂದ ಮಂಜು ಮನೆವರೆಗೆ ಪೈಪ್‌ಲೈನ್ ನಿರ್ಮಾಣ ಕಾಮಗಾರಿ, ಪುಟ್ಟರಾಜು ಮನೆ ಹತ್ತಿರ ಹಾಗೂ ಉದ್ಯಾನವನ ಪಕ್ಕದಲ್ಲಿ ಸಿಸ್ಟನ್ ಅಳವಡಿಸುವ ಕಾಮಗಾರಿ ಮತ್ತು ಅಂಬೇಡ್ಕರ್ ನಗರಕ್ಕೆ ವಿದ್ಯುತ್ ಸಂಪರ್ಕ ಒದಗಿಸುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅಂದಾಜು ಪಟ್ಟಿ ಮತ್ತು ಎಷ್ಟು ಮೊತ್ತಕ್ಕೆ ಬಿಲ್ ಪಾವತಿಸಲಾಗಿದೆ ಎನ್ನುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಎದುರುದಾರರು ಹಾಜರುಪಡಿಸಿರುವುದಿಲ್ಲ.

ಎದುರುದಾರರು ತಮ್ಮ ಆಕ್ಷೇಪಣೆಯೊಂದಿಗೆ ತನಿಖಾಧಿಕಾರಿ ವರದಿಯಲ್ಲಿ ಉಲ್ಲೇಖಿಸಿರುವ ವ್ಯತ್ಯಾಸದ ಮೊತ್ತಗಳಿಗೆ ಸಂಬಂಧಿಸಿದಂತೆ ಬಿಲ್ ಪ್ರತಿಗಳನ್ನು ಹಾಜರುಪಡಿಸದೆ ಇರುವುದರಿಂದ ಎದುರುದಾರರ ಆಕ್ಷೇಪಣೆಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ತನಿಖಾಧಿಕಾರಿಯವರ ವರದಿಯನ್ನು ಅಲ್ಲಗಳೆಯಲು ಯಾವುದೇ ಸಾಕ್ಷ್ಯಾಧಾರಗಳಿಲ್ಲ.

ತನಿಖಾಧಿಕಾರಿಯವರ ವರದಿಯನ್ನು ಪರಿಶೀಲಿಸಿದಾಗ, 11 ಕಾಮಗಾರಿಗಳಲ್ಲಿ ಒಟ್ಟು ರೂ.56,555/-ಗಳು ವ್ಯತ್ಯಾಸ ಕಂಡುಬರುತ್ತಿದ್ದು, ಕೆಲವು ಕಾಮಗಾರಿಗಳಿಗೆ ಅಂದಾಜು ಮೊತ್ತಕ್ಕಿಂತ ಹೆಚ್ಚು ಖರ್ಚು ಮಾಡಿರುವುದು ಕಂಡು ಬಂದಿರುತ್ತದೆ. ಆ ಬಗ್ಗೆ ವಿಚಾರಣೆ ನಡೆಸಿ ಮೊತ್ತವನ್ನು ವಸೂಲಿ ಮಾಡಲು ಕ್ರಮ ಕೈಗೊಳ್ಳಬೇಕಾಗುತ್ತದೆ. ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ ಎದುರುದಾರರು ಅಧಿಕಾರ ದುರುಪಯೋಗ ಮತ್ತು ಕರ್ತವ್ಯಲೋಪ ಎಸಗಿರುವುದು ಕಂಡುಬಂದಿರುತ್ತದೆ. ಆದ್ದರಿಂದ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯಸ್ಥರಾಗಿರುತ್ತಾರೆ.

ಆದ್ದರಿಂದ 2ನೇ ಎದುರುದಾರರಾದ ಶ್ರೀಮತಿ ದಿವ್ಯಜ್ಯೋತಿ ಬಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಾಮನದುರ್ಗ ಗ್ರಾಮ ಪಂಚಾಯತಿ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಇವರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೇ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ನಿಯಮಗಳನ್ನು ಉಲ್ಲಂಘಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ, 1966ರ ನಿಯಮಗಳು 3(1)(ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿರುವುದರಿಂದ, ಸದರಿಯವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ಅಡಿಯಲ್ಲಿ 2ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲು ಶಿಫಾರಸ್ಸು ಮಾಡಿರುತ್ತಾರೆ.

ಶ್ರೀಮತಿ ದಿವ್ಯಜ್ಯೋತಿ ಬಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಾಮನದುರ್ಗ ಗ್ರಾಮ ಪಂಚಾಯತಿ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/33/ಗ್ರಾಪಂಕಾ/2019, ಬೆಂಗಳೂರು, ದಿನಾಂಕ:02-02-2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀಮತಿ ದಿವ್ಯಜ್ಯೋತಿ ಬಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಾಮನದುರ್ಗ ಗ್ರಾಮ ಪಂಚಾಯತಿ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಇವರ ವಿರುದ್ಧದ ಆಪಾದನೆಗಳ

ಬಗ್ಗೆ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ 14(ಎ) ಅಡಿಯಲ್ಲಿ ಈ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸಲಾಗಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ-8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

<u>ಗೆ:</u>

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. **(ಪುಟ ಸಂಖ್ಯೆ 1 ರಿಂದ 229 ರವರೆಗಿನ ಮೂಲದಾಖಲೆಗಳನ್ನು ಈ ಪತ್ರದೊಂದಿಗೆ ಹಿಂದಿರುಗಿಸಲಾಗಿದೆ)**
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಚಿಕ್ಕಮಗಳೂರು, ಚಿಕ್ಕಮಗಳೂರು ಜಿಲ್ಲೆ.
5) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ತರೀಕೆರೆ, ಚಿಕ್ಕಮಗಳೂರು ಜಿಲ್ಲೆ.
6) ಶ್ರೀಮತಿ ದಿವ್ಯಜ್ಯೋತಿ ಬಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಾಮನದುರ್ಗ ಗ್ರಾಮ ಪಂಚಾಯತಿ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
7) ಗಣಕ ಕೋಶ.
8) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.